**ದಿನಾಂಕ 02.06.2026 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರತಿಜ್ಞಾವಿಧಿ ಬೋಧಿಸಲಾಯಿತು.**

**ಪಾಟೀ ಸವಾಲುಃ ಎದುರುದಾರರ 2 ಮತ್ತು 3** ಪರ CR ವಕೀಲರಿಂದ

ನಾನು 9 ನೇ ತರಗತಿವರೆಗೆ ಓದಿರುತ್ತೇನೆ. ದಾವೆ 76/2018 ನ್ನು ನಾನು ಬಸನಗೌಡ, ಜಾವೀದ್ ಬೇಗಂ ಮತ್ತು ಬಸವರಾಜ ಇವರ ವಿರುದ್ಧ ಸಲ್ಲಿಸಿದೆದೇನೆ. ದಾವೆ ಸಲ್ಲಿಸುವ ಕಾಲಕ್ಕೆ ದಾವ ಜಮೀನು ಸ.ನಂ.56/1 ರಲ್ಲಿ 6 ಎಕರೆ ಇತ್ತು. ನಂತರ ಸ.ನಂ.56/2 ಎಂದು ಆಗಿರುತ್ತದೆ ಎಂದು ನುಡಿಯುತ್ತಾರೆ. ಸ.ನಂ.56/1 ಇದು 2018-19 ರಲ್ಲಿ ಸ.ನಂ.56/2 ಎಂದು ಆಗಿರುತ್ತದೆ. ಸದರಿ ದಾವೆಯಲ್ಲಿ ನಾನು ಮತ್ತು ಬಸನಗೌಡ ಹಾಗೂ ಬಸವರಾಜ 3 ಜನ ಮಾತ್ರ ರಾಜಿ ಮಾಡಿಕೊಂಡಿರುತ್ತೇವೆ ಎಂದರೆ ಸಾಕ್ಷಿ ಮಮ್ತಾಜ ಬೇಗಂ ದಾವೆಯಲ್ಲಿ ಹಾಜರು ಆಗದೇ ಇದುದ್ದರಿಂದ ಅವರನ್ನು ಬಿಟ್ಟು ನಾನು ಬಸನಗೌಡ ಮತ್ತು ಬಸವರಾಜ ಮೂವರು ಮಾತ್ರ ರಾಜಿ ಮಾಡಿಕೊಂಡಿರುತ್ತೇವೆ ಎಂದು ನುಡಿಯುತ್ತಾರೆ. ಸದರಿ ಮಮ್ತಾಜ ಬೆಗಂ ಇವರನ್ನು ಉದ್ದೇಶ ಪೂರ್ವಕವಾಗಿ ಪಕ್ಷಕಾರರನ್ನಾಗಿ ಮಾಡದೇ ರಾಜಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನ್ಯಾಯಲಯದಲ್ಲಿ 2022-23 ರಲ್ಲಿ ರಾಜಿ ಮಾಡಿಕೊಂಡಿರುತ್ತೇವೆ. 2022-23 ರಲ್ಲಿ ರಾಜಿ ಮಾಡಿಕೊಂಡಿರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸ.ನಂ.56/1 ರಲ್ಲಿ 1963-64 ರಲ್ಲಿ ದೇವದುರ್ಗ-ಶಹಪೂರು ರಸ್ತೆಗಾಗಿ 2 ಎಕರೆ 36 ಗುಂಟೆ ಸ್ವಾಧೀನಪಡಿಸಿಕೊಳ್ಳಲಾಗಿದೆ ಎಂದರೆ ಸರಿ. ಈ ಪ್ರಕರಣದಲ್ಲಿ ಎಷ್ಟು ಬಾರಿ ಮತ್ತು ಯಾವ ದಿನಾಂಕಗಳಂದು ನನ್ನ ಮುಖ್ಯ ವಿಚಾರಣ ಪ್ರಮಾಣ ಪತ್ರಗಳನ್ನು ಸಲ್ಲಿಸಲಾಗಿದೆ ಎಂದು ನನಗೆ ಹೇಳಲು ಬರುವುದಿಲ್ಲ. ಸ.ನಂ.56/1 ರಲ್ಲಿ 6 ಎಕರೆ ಜಮೀನನ್ನು 1984-85 ರಲ್ಲಿ ನಾನು ಖರೀದಿ ಮಾಡಿರುತ್ತೇನೆ. ನಾನು ಜಮೀನನ್ನು ಖರೀದಿ ಮಾಡುವ ಪೂರ್ವದಲ್ಲಿ ರಸ್ತೆಗಾಗಿ 2 ಎಕೆರ 36 ಗುಂಟೆ ಸ್ವಾಧೀನವಾಗಿತ್ತು ಎಂದರೆ ಸರಿ. ನನ್ನ ಮುಖ್ಯ ವಿಚಾರಣ ಪ್ರಮಾಣ ಪತ್ರದಲ್ಲಿ ಬರೆದ ಸಂಗತಿಗಳು ನನಗೆ ಗೊತ್ತಿರುವುದಿಲ್ಲ. ಸ.ನಂ.56/1 ರಲ್ಲಿ 23 ಎಕರೆ ಚಿಲ್ಲರೆ ಗುಂಟೆಯಲ್ಲಿನ ನಾನು ಖರೀದಿ ಮಾಡಿದ 6 ಎಕರೆ ಜಮೀನು ಉತ್ತರಕ್ಕೆ ಬರುತ್ತದೆ. ಸ.ನಂ.56/1 ರ 6 ಎಕರೆ ಚಕ್ಬಂದಿ ಹೇಳಲು ಬರುವುದಿಲ್ಲ. ನಾನು ಖರೀದಿ ಮಾಡಿದ ನಂತರ ಬಸವರಾಜ ಇವರು ಸ.ನಂ.56/2 ರಲ್ಲಿ 29 ಗುಂಟೆಯನ್ನು ಮತ್ತು ಮಮ್ತಾಜ ಬೇಗಂ ಇವರು ಸ.ನಂ.56/3 ರಲ್ಲಿ 33 ಗುಂಟೆಯನ್ನು ಖರೀದಿ ಮಾಡಿರುತ್ತಾರೆ ಎಂದರೆ ಸಾಕ್ಷಿ ಅನ್ಯಾಯವಾಗಿ ಖರೀದಿ

ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಅನ್ಯಾಯವಾಗಿ ಖರೀದಿ ಮಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮಮ್ತಾಜ ಬೇಗಂ ಇವರನ್ನು ಅಮಲ್ ಜಾರಿ ಅರ್ಜಿಯಲ್ಲಿ ಪಕ್ಷಕಾರರನ್ನಾಗಿ ಮಾಡಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಿಪಿ-4 ರಲ್ಲಿ ಸ.ನಂ.56/*/* ರಲ್ಲಿ 2 ಎಕರೆ 36 ಗುಂಟೆ ದೇವದುಗರ್-ಶಹಪೂರು ರಸ್ತೆಗಾಗಿ ಹೋಗಿರುವುದನ್ನು ನಮೂದು ಮಾಡಲಾಗಿದೆ ಎಂದರೆ ಸರಿ. ಸದರಿ ನಿಪಿ-4 ರಲ್ಲಿ ಮಮ್ತಾಜ ಬೇಗಂ ಇವರ ಹೆಸರಿನಲ್ಲಿ 33 ಗುಂಟೆ ಮತ್ತು ಎ.ಬಸವರಾಜ ಇವರ ಹೆಸರಿಗೆ 29 ಗುಂಟೆ ಎಂದು ನಮೂದು ಮಾಡಲಾಗಿದೆ ಎಂದರೆ ತೆಗೆಯಲಾಗಿದೆ ಎಂದು ನಮೂದು ಮಾಡಲಾಗಿದೆ ಎಂದು ನುಡಿಯುತ್ತಾರೆ. ನಿಪಿ-5 ರಲ್ಲಿ ಶಿವಬಸ್ಸಮ್ಮಳ ಹೆಸರಿಗೆ 6 ಎಕರೆ, ಮುಮ್ತಾಜ ಬೇಗಂ ಹೆಸರಿಗೆ 33 ಗುಂಟೆ ಮತ್ತು ಎ.ಬಸವರಾಜ ಹೆಸರಿಗೆ 23 ಗುಂಟೆ ಎಂದು ನಮೂದು ಮಾಡಲಾಗಿದೆ ಎಂದರೆ ಸರಿ. ಬಸನಗೌಡ ತಂದೆ ಶಿವಪಾದಪ್ಪ ಸ.ನಂ.56 ರ ಜಮೀನನ್ನು ಖರೀದಿಸಿದ ಎಲ್ಲ ವ್ಯಕ್ತಿಗಳ ವಿರುದ್ಧ ಜಿಲ್ಲಾಧಿಕಾರಿಗಳು ತಾಂತ್ರಿಕ ಸಹಾಯಕರು ಹಾಗೂ ಪದ ನಿಮಿತ್ತ ಭೂ ದಾಖಲಾತಿಗಳ ಉಪ ನಿರ್ದೇಶಕರ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿದ್ದರು ಎಂದರೆ ಸರಿ. ಸದರಿ ಮೇಲ್ಮನವಿಯಲ್ಲಿ ನಾನು ಹಾಜರು ಆಗಿ ತಕರಾರು ಸಲ್ಲಿಸಿರುತ್ತೇನೆ. ಸದರಿ ಜಿಲ್ಲಾಧಿಕಾರಿಗಳು ಖರೀದಿ ಪತ್ರಗಳಂತೆ ವಿಸ್ತೀರ್ಣಗಳಲ್ಲಿ ವ್ಯಾತ್ಯಾಸ ಇರುವುದರಿಂದ ಸದರಿ ಎಲ್ಲ ಹಿಸ್ಸಾ ನಂಬರಗಳನ್ನು ರದ್ದುಗೊಳಿಸಿ ಸ್ವಾಧೀನವಾದ ವಿಸ್ತೀರ್ಣವನ್ನು ಹಕ್ಕು ದಾಖಲಾತಿಗಳಲ್ಲಿ ಸ್ಥಿರಿಕರಣವಾದ ನಂತರ ಎಲ್ಲ ಪಕ್ಷಕಾರರಿಗೆ ನೋಟಿಸು ಜಾರಿ ಮಾಡಿ ಸ್ಥಳ ಪರಿಶೀಲನೆ ಮಾಡಿ ಹಕ್ಕು ದಾಖಲೆ ಮತ್ತು ಕಬ್ಜದೊಂದಿಗೆ ಕ್ರಮ ಜರುಗಿಸಲು ಎ.ಡಿ.ಎಲ್.ಆರ್ ಇವರಿಗೆ ಆದೇಶ ಮಾಡಿರುತ್ತಾರೆ ಎಂದರೆ ಸರಿ. ಎಸಿ ರಾಯಚೂರು ಇವರಿಗೆ ನಾನು ಮಾಡಿದ ಮೇಲ್ಮನವಿಯಲ್ಲಿ ಎಸಿ ರಾಯಚೂರು ಇವರು ಎಲ್ಲ ಹಿಸ್ಸಾಗಳನ್ನು ರದ್ದು ಮಾಡಿ ರಸ್ತೆಗಾಗಿ ಸ್ವಾಧೀನ ಪಡಿಸಿಕೊಂಡ 2 ಎಕರೆ 36 ಗುಂಟೆಯನ್ನು ಸ.ನಂ.56 ರಲ್ಲಿ ಅಳವಡಿಸಿ ನಂತರ ಕಾಲಕ್ರಮೇಣವಾಗಿ ಖರೀದಿ ಪತ್ರಗಳ ಆಧಾರದ ಮೇಲೆ ಪಹಣಿ ಮಾಡಲು ಡಿಡಿಎಲ್.ಆರ್ ಇವರಿಗೆ ಆದೇಶ ಮಾಡಿರುತ್ತಾರೆ ಎಂದರೆ ಸರಿ. ನಿಪಿ-6 ಮತ್ತು 7 ರ ಆದೇಶದ ಆಧಾರದ ಮೇಲೆ ಸ.ನಂ.56/1 ರಲ್ಲಿನ 6 ಎಕರೆಯಲ್ಲಿ ರಸ್ತೆಗಾಗಿ ಸ್ವಾಧೀನ ಪಡಿಸಿಕೊಂಡ 2 ಎಕರೆ 36 ಗುಂಟೆಯನ್ನು ಕಡಿಮೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಿಪಿ-8 ಸ್ವಾಧೀನ ಪಡಿಸಿಕೊಂಡ ಜಮೀನಿನ ಪರಿಹಾರದ ಮೊತ್ತವನ್ನು ಶಿವಪಾದಪ್ಪ ಪಡೆದ ರಸೀದಿಯನ್ನು ಹಾಜರು ಮಾಡಿರುತ್ತಾರೆ ಎಂದರೆ ಸರಿ. ಎಸಿ ರಾಯಚೂರು ಇವರಿಗೆ ದಿನಾಂಕ 01.02.2018 ರಂದು ಸ.ನಂ.56 ರಲ್ಲಿ 2 ಎಕೆರ 36 ಗುಂಟೆ ಸ್ವಾಧೀನ ಪಡಿಸಿಕೊಂಡ ಜಮೀನನ್ನು ಪಹಣಿಯಲ್ಲಿ ನಮೂದು ಮಾಡುವಂತೆ ಅರ್ಜಿ ಸಲ್ಲಿಸಿರುತ್ತೇನೆ ಎಂದರೆ ಸರಿ. ಸ.ನಂ.56 ರಲ್ಲಿ 2 ಎಕರೆ 36 ಗುಂಟೆ

ದೇವದುರ್ಗ ಶಹಪೂರು ರಸ್ತೆಗೆ ಎಂದು ಪಹಣಿಯಲ್ಲಿ ಸೇರಿಲಾಗಿದೆ ಎಂದರೆ ಸರಿಯಲ್ಲ. ನಿಪಿ-10 ಪಹಣಿಯಲ್ಲಿ ಸ.ನಂ.56/*/* ಎಂದು ನಮೂದು ಮಾಡಲಾಗಿದೆ ಹಿಸ್ಸಾ ನಂ.1 ಎಂದು ನಮೂದು ಮಾಡಿಲ್ಲ ಎಂದರೆ ಸರಿ. ನಿಪಿ-19 ರ ಪಹಣಿಯಲ್ಲಿ ನನ್ನ 6 ಎಕರೆ ಜಮೀನನ್ನು ಸ.ನಂ.56/*/8 ಎಂದು ಬರುತ್ತಿದೆ ಎಂದರೆ ಸರ್ವೆ ಇಲಾಖೆಯಲ್ಲಿ ಸರ್ವೆ ನಂಬರಗಳನ್ನು ಬದಲಾವಣೆ ಮಾಡುತ್ತಿರುವುದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸ.ನಂ.56/1 ರಲ್ಲಿ ನನ್ನ 6 ಎಕರೆ ಜಮೀನಿನಲ್ಲಿ ಸ್ವಾಧೀನ ಪಡಿಸಿಕೊಂಡ 2 ಎಕರೆ 36 ಗುಂಟೆ ಕಡಿಮೆ ಆಗಿದ್ದರಿಂದ ನನ್ನ 6 ಎಕರೆ ಕ್ಷೇತ್ರದ ಸ.ನಂ. ನ್ನು 56/*/8 ಎಂದು ಬದಲಾವಣೆ ಮಾಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಕಾಲವಕಾಶವನ್ನು ಕೋರಿದ್ದರಿಂದ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ.